ಅನಿಸ್ತಿತ್ತು. ಅದೃಷ್ಟದ ಆಟ, ಒಬ್ಬಳು ಬಡವಿ, ಇನ್ನೊಬ್ಬಳು ಕೋಟ್ಯಾಧೀಶ್ವರಿ . ಆದರೂ ಅಂಚನಾಗೆ ನಾನು ತಿಳಿದಂತೆ ವೈರಿಗಳ್ಯಾರೂ ಇರ್ಲಿಲ್ಲ. ಇದೇನು ಕೊಲೆ ಅನ್ನಿಸಲ್ಲ.'

ಕೀರ್ತಿಮಾನ್ ತೀಕ್ಷ್ಣವಾಗಿ ಅವನತ್ತ ನೋಡಿದನು, 'ಅದು ನಿನಗೇಗೆ ಗೊತ್ತು ಶರಭ್? ಇನ್ನೂ ಪೋಸ್ಟ್ ಮಾರ್ಟಮ್ ವರದಿ ಬಂದ ಮೇಲೆ ತಾನೆ ಸತ್ಯ ಹೊರಬೀಳುವುದು..?'

ಅಷ್ಟರಲ್ಲಿ ಆಫೀಸಿನ ಪ್ಯೂನ್ ಚಹಾ ತಂದಿಡಲು ಬಂದನಾದ್ದರಿಂದ ಇಬ್ಬರೂ ಅವನು ಹೋಗುವವರೆಗೂ ಮಾತಾಡದೇ ಶಾಂತವಾಗಿದ್ದರು.

ಶರಭ್ ಹುಬ್ಬುಗಂಟಿಕ್ಕಿ ಕೀರ್ತಿಮಾನ್ ಕಡೆಗೆ ನೋಡಿದ, 'ಅಂದರೆ ಅಂಚನಾ ಕೊಲೆಯಾಗಿದ್ದಾಳೆ ಅಂತ ಅನ್ನಿಸತ್ತಾ ನಿಂಗೆ? ಹೇಗೆ ಯಾಕೆ?'

ಕೀರ್ತಿಮಾನ್ ಅವನ ಅಚ್ಚರಿಯನ್ನು ತಳ್ಳಿಹಾಕುತ್ತಾ ವಿವರಿಸಿದ, 'ನಮಗಿನ್ನೂ ಗೊತ್ತಿಲ್ಲಾ ಅಂದೆ. ನಾವು ಇದರಲ್ಲಿ ವರ್ಸ್ಟ್ ಸಿನಾರಿಯೋ ಅಂತಾರಲ್ಲ; ಅತ್ಯಂತ ಕೆಟ್ಟ ಸಾಧ್ಯತೆ ಅದು.. ಕೊಲೆಯೇ ಆಗಿದ್ದರೆ ನಾವು ಐದು ಕೋಟಿ ರೂ. ಅವಳ ನಾಮಿನಿ– ಕಂಚಿಗೆ ಡೆತ್ ಬೆನಿಫಿಟ್ ಅಂತಾ ಕೊಡಲೇ ಬೇಕಾಗತ್ತೆ'

ಅಸಹನೆಯಿಂದ ತಲೆ ಅದುರಿಸಿದ ಶರಭ್,

'ಇಂತಾ ಅಸಾಧ್ಯವಾದ ಚಾನ್ಸ್ ಉಹಿಸಿಕೊಂಡು ನೀನೂ, ನಿಮ್ಮ ಬಾಸೂ ನನ್ನ ಕೆಲಸವನ್ನು ತಪ್ಪು ಎಣಿಸ್ತೀರಾ. ಹಾಗೆ ನೋಡಿದರೆ ಅಂಚನಾಗೆ ತಿಳಿದಂತಾ ಕೊಲೆ ಮಾಡುವಂತಾ ವೈರಿಗಳೇ ಇರ್ಲಿಲ್ಲಾ.., ಇನ್ನು ಮನೆಯಲ್ಲಿ ಬರ್ತ್‌ಡೇ ಪಾರ್ಟಿ ನಡೀತಿದೆ; ಆಗ ಆಕೇನಾ ಆ ಈಜಿನ ಕೊಳದ ಮೂಲೆಗೆ ಕರೆದುಕೊಂಡು ಹೋಗಿ ಮರ್ಡರ್ ಮಾಡಿ ಮುಳುಗಿಸಿದ್ದಾರೆ ಅನ್ಕೊಂಡಿದ್ದೀರಾ?..ಅಂತಾ ಚಾನ್ಸೇ ಇಲ್ಲಾ..' ತನ್ನ ಸೀಟಿನಲ್ಲಿ ಮುಂದೆ ಸರಿದು ದೊಡ್ಡ ಗುಟ್ಟು ಬಿಚ್ಚಿಡುವಂತೆ ಮೆತ್ತಗೆ ಉಸುರಿದ ಶರಭ್.

ಕೀರ್ತಿಮಾನ್ ಚಹಾ ಕಪ್ ಕೆಳಗಿಟ್ಟು ಗೆಳೆಯನ ಮುಖವನ್ನು ಗಮನದಿಂದ ನೋಡಿದ, 'ಮತ್ತೆ ಹೇಗೆ ಸತ್ತಿರಬಹುದು ಅಂತಾ ನಿನಗನಿಸತ್ತೆ?'

ಅದಕ್ಕೇ ಕಾಯುತ್ತಿದ್ದವನಂತೆ ಶರಭ್ 'ಅವಳು ಆತ್ಮಹತ್ಯೆ ಮಾಡಿಕೊಂಡಿರಬಹುದು; ಜೀವನದಲ್ಲಿ ಜಿಗುಪ್ಸೆಯಾಗಿ. ಆತ್ಮಹತ್ಯೆ ಆದರೆ ನಮ್ಮ ಪಾಲಿಸಿಯ ಎಕ್ಸ್‌ಕ್ಲೂಶನ್ಸ್ ಪಟ್ಟಿಯಲ್ಲಿದೆ, ಆಗ ನಾವು ಬೆನಿಫಿಟ್ ಕೊಡಬೇಕಾದ್ದಿಲ್ಲ..'ಎಂದನು.

ಕೀರ್ತಿಮಾನ್ ಅರೆಗಳಿಗೆ ಅವನತ್ತ ದಿಟ್ಟಿಸಿ ಜೋರಾಗಿ ನಕ್ಕುಬಿಟ್ಟ, 'ವಾಹ್ ವಾಹ್, ಬಹಳ ಸುಲಭವಾಯ್ತು ನಮಗೆ ಅಲ್ಲವೆ? ತನ್ನ ಬರ್ತ್‌ಡೇ ಪಾರ್ಟಿ ನಡೆಯುತ್ತಿದ್ದಾಗ, ಸಡನ್ನಾಗಿ ಜಿಗುಪ್ಸೆ ಬಂದು?.. ಊಹೂಂ.. ಈ ಮಾತು ನಿನ್ನ ಮನಸ್ಸು ಹೇಳುತ್ತಿದೆಯಾ ಅಥವಾ ನಿನ್ನ ಮಿದುಳಾ?'

ಶರಭ್ ಮೂಕನಾಗಿ ಅವನನ್ನು ಮಾತಿಲ್ಲದೇ ನೋಡಿದ.

'ಶರೂ, ಅಂಚನಾಗೆ ತಾನು ಆತ್ಮಹತ್ಯೆ ಮಾಡಿಕೊಂಡಿದ್ದರೆ ಹಣ ಕಂಚಿಗೆ ಸಿಗುವುದಿಲ್ಲ ಎಂಬ ರೂಲ್ ಗೊತ್ತಿತ್ತಲ್ಲವೆ?' ಕೇಳಿದ ಕೀರ್ತಿಮಾನ್ ಚಿಕ್ಕ ವಿಜಯ ಸಾಧಿಸಿದವನಂತೆ.

ಶರಭ್ ಬಿದ್ದರೂ ಮೀಸೆ ಮಣ್ಣಾಗದವನಂತೆ, 'ಹೂಂ ಏನೋ ನನಗನಿಸಿದ್ದು ನಾನು ಹೇಳಿದೆ, ನಾವು ಆತ್ಮಹತ್ಯೆ ಅಂತಾ ಪ್ರೂವ್ ಮಾಡಿದರೆ ಕಂಪನಿ ಈ ಹಣ ಕೊಡಬೇಕಾಗಿಲ್ಲ ಅಂತಾ ನನ್ನ ವಾದ..ನೀನೂ ಹಾಗೆ ಯೋಚಿಸಿದರೆ ಒಳ್ಳೆಯದು..ಇನ್ಯಾವುದೇ ಕಾರಣ ಆದರೂ ನಾವು ಐದು ಕೋಟಿ ಬಿಚ್ಚಬೇಕಾಗತ್ತೆ..'

'ಅದು ಬಿಡು, ಸತ್ಯ ಕೊನೆಗೆ ಬಂದೇ ಬರತ್ತೆ.. ಶರೂ ಅವಳಿಗೆ ಆಗದವರು ಬಲವಂತವಾಗಿ ಕೊಂದಿದ್ರೆ?' ಹುಬ್ಬೇರಿಸಿದ ಕೀರ್ತಿಮಾನ್

'ನನಗೆ ತಿಳಿದವರು ನಿನ್ನೆ ರಾತ್ರಿ ಅಲ್ಲಿ ಹೇಳಿದ ಪ್ರಕಾರ ಅವಳ ಮೈ ಮೇಲೆ ಯಾವುದೇ ಹೊರಗಿನ ಗಾಯವಿರಲಿಲ್ಲ, ಗುಂಡೇಟು? ಚಾಕು ತಿವಿತ?..ನಥಿಂಗ್!..' ಎಂದು ವಾದಿಸಿ ಮುಖವುಬ್ಬಿಸಿ ಕುಳಿತ ಶರಭ್.

'ಹಾಗಾದರೆ ಅಘಘಾತವಾಗಿರಬಹುದೆ? ಆಕಸ್ಮಿಕವಾಗಿ ನೀರಿಗೆ ಬಿದ್ದು ಸತ್ತಿದ್ದರೆ..' ಎಂದ ಕೀರ್ತಿಮಾನ್.

ಆಗ ಶರಭ್ ಮುಖ ಇನ್ನೂ ಕಳಾಹೀನವಾಯಿತು.

'ಅಯ್ಯೋ, ಹಾಗಾಗಿದ್ದರೆ ನಾವು ಆ ಕ್ಲೈಮ್ ಪ್ರಕಾರ ಐದು ಕೋಟಿ ರೂ. ಕಕ್ಕಬೇಕಾಗುತ್ತೆ..ಆದರೆ, ಅಂಚಿ ಸ್ವಿಮಿಂಗ್‌ನಲ್ಲಿ ಚಾಂಪಿಯನ್ ಎಂದು ಹೇಳಿಕೊಂದಿದ್ದಳು...ನೀರಲ್ಲಿ ಆಕಸ್ಮಿಕವಾಗಿ ಮುಳುಗಿ ಸತ್ತಿರಲು ಸಾಧ್ಯವಿಲ್ಲ. ನಾನೂ ಆ ಪಾರ್ಟಿಯಲ್ಲಿದ್ದೆ, ಹಾಗನಿಸಲಿಲ್ಲ' ಎಂದ ಶರಭ್.

'ನಿನ್ನೆ ರಾತ್ರಿ ನೀನೂ ಅಲ್ಲಿದ್ದೆಯಾ?' ಎಂದು ಕೀರ್ತಿಮಾನ್ ಕುತೂಹಲದಿಂದ ಪ್ರಶ್ನಿಸಿದ.

'ಅದರಲ್ಲಿ ಆಶ್ಚರ್ಯವೇನಿದೆ? ನನ್ನ ಕ್ಲಯಂಟ್ಸ್ ಅವರು. ಅಲ್ಲದೆ ನಾನು ಅಂತಾ ದೊಡ್ಡ ದೊಡ್ಡ ಕಕ್ಷಿದಾರರ ಪರಿಚಯ ಮಾಡಿಕೊಂಡು ನೆಟ್‌ವರ್ಕ್ ಮಾಡುವುದೇ ಇಂತಾ ಸಂತೋಷ ಕೂಟಗಳಲ್ಲಿ. ಪಾರ್ಟ್ ಆಫ್ ಮೈ ಜಾಬ್..' ಎಂದು ಮೊಂಡಾಗಿ ಉತ್ತರಿಸಿದ ಶರಭ್.

ಕೀರ್ತಿಮಾನ್ ಶಾಂತವಾಗಿಯೇ ಕೇಳಿದ, 'ಅಲ್ಲಿಗೆ ನಿನ್ನೆ ಕಂಚಿ ಏಕೆ ಬರಲಿಲ್ಲ?' ಅದೂ ತನ್ನ ಮತ್ತು ಪ್ರೀತಿಯ ಅವಳಿ ಅಕ್ಕನ ಬರ್ತ್‌ಡೇ ಪಾರ್ಟಿಗೆ?'

'ಅವಳು ಮಾಡುತ್ತಿದ್ದ ಹೊಸ ನಾಟಕದ ರಿಹರ್ಸಲ್ಸ್‌ಗಾಗಿ ಅವಳನ್ನು ಆಗಲೇ ಡೈರೆಕ್ಟರ್ ಬಳಿಗೆ ಕರ್ಕೊಂಡು ಹೋಗಿದ್ದರು. ಪಾರ್ಟಿಗೆ ಬರಕ್ಕೆ ಆಗಲ್ಲಾ ಅಂತಾ ತನ್ನ ಏಜೆಂಟ್ ರಾಜೂ ಕೈಲಿ ತಡವಾಗಿ ಹೇಳಿ ಕಳಿಸಿದ್ಲು. ಅಷ್ಟೇ ಎಲ್ಲರಿಗೂ ಗೊತ್ತಿರೋದು!' ಎಂದು ಭುಜ ಕುಣಿಸಿದ ಶರಭ್.

'ಹಾಗಾದ್ರೆ ಅವನೂ ಪಾರ್ಟೀಲೇ ಇದ್ದಾ ಅನ್ನು?' ಕೀರ್ತಿಮಾನ್ ಪ್ರಶ್ನೆಗೆ ಅವನು ತಲೆ ಅಡ್ಡ ಆಡಿಸಿದ.

'ಊಹೂ ಬಂದಿದ್ದ, ಆದರೆ ಅವನು ಬೇಗ ಹೊರಟುಬಿಟ್ಟ..ತಾನೂ ಕಂಚಿ ಇರೋ ಜಾಗಕ್ಕೆ ಹೋಗ್ತೀನಿ ಅಂ ಅಂಚನಾ ಹೆಣ ಸಿಕ್ಕಕ್ಕೆ ಬಹಳ ಮುಂಚೇನೆ ಹೋಗ್ಬಿಟ್ಟಿದ್ದ'.

ಕೀರ್ತಿಮಾನ್ ಎದ್ದ.

'ಸರಿ, ಶರೂ, ನೀನು ಊರಲ್ಲೆ ಇರು.. ಯಾವುದಕ್ಕೂ ನಿನ್ನತ್ರ ಆಗಾಗ ವಿಚಾರಿಸೋದು ಇದ್ದೇ ಇರತ್ತೆ..ನಾನೀಗ ಪೊಲೀಸ್ ಬಳಿ ಹೋಗ್ತೀನಿ. ಆಮೇಲೆ ಕಂಚೀನ ನೋಡಿ, ಶಶಿಧರ್ ದೇಸಾಯಿ ಮನೆ, ಅಂಚನಾ ಅಂತಿಮ ಸಂಸ್ಕಾರ.. ಇದೆಲ್ಲಾ ಇರತ್ತೆ. ನಾನು ಒಂದೆರಡು ದಿನಾ ಬಿಜಿಯಾಗಿರ್ತೀನೆ..ಬೈ..' ಎಂದು ಹೊರಡಲು ಸಿದ್ಧನಾದ.

ಶರಭ್ ಕೂಡಾ ಮನಸ್ಸಿಲ್ಲದೇ ಎದ್ದ, 'ಸರಿಯಪ್ಪಾ, ನಾನು ಪ್ರಾಮಾಣಿಕವಾಗಿ ಕಂಪನಿಗಾಗಿ ದುಡ್ದು ಮಾಡಿಕೊಡ್ಬೇಕು ಅಂತಾನೇ ಟ್ರೈ ಮಾಡ್ತಿರ್ತೀನಿ..ಮಾಡಿದೆ.. ಇದು ಮೊದಲ ಸಲ ಹೀಗಾಯಿತು!....ಆಗಾಗ ಫೋನ್ ಮಾಡ್ತಾ ಇರ್ತೀನಿ. ಯಾಕೋ ಇದೆಲ್ಲಾ ನನ್ನ ಜವಾಬ್ದಾರಿನೇ ಅಂತಾ ಗಿಲ್ಟ್ ಕಾಡುತಿರತ್ತೆ...' ಎನ್ನುತ್ತಾ ಹೊರಟ.

'ಅದು ಬಿಡು, ನಿನ್ನ ಸಹಾಯ ಬೇಕಾದಾಗ ಕೇಳ್ತೀನಿ..ಬೈ..' ಎಂದು ಅಲ್ಲಿಂದ ಹೊರಬಿದ್ದ ಕೀರ್ತಿಮಾನ್.

ಕೀರ್ತಿಮಾನ್ ತನ್ನ ನೀಲಿ ಫೋರ್ಡ್ ಕಾರ್ ಹತ್ತಿ ಹೊರಟು ಪೋಲಿಸ್ ಸ್ಟೇಷನ್ನಿನಲ್ಲಿ ತನಿಖಾಧಿಕಾರಿ ಖಾದರ್ ಅವರನ್ನು ಭೇಟಿ ಮಾಡಿದ. ಆತ ಇವನಿಗೆ ಹಳೆಯ ದೋಸ್ತ್. ಇಂತಾ ಇನ್ಸೂರೆನ್ಸ್ ಕೇಸ್ ತನಿಖೆ ಸಂಬಂಧವಾಗಿ ಅವರೊಂದಿಗೆ ಮುಂಚೆಯೂ ಹಲವು ಬಾರಿ ಸಹಕರಿಸಿದ್ದ.

ಅವರೊಂದಿಗೆ ಇದುವರೆಗಿನ ವಿವರಗಳನ್ನು ಪಡೆಯುತ್ತಾ ಹೋದ.

ಅವರೇ ಹಿಂದಿನ ರಾತ್ರಿ ಈ ದುರ್ಘಟನೆಯ ಸುದ್ದಿ ಮುಟ್ಟಿದೊಡನೆ ಶಶಿಧರ್ ದೇಸಾಯಿಯವರ ಮನೆಗೆ ಹೋಗಿ ಶವವನ್ನು ವಶಕ್ಕೆ ತೆಗೆದುಕೊಂಡಿದ್ದರ ಬಗ್ಗೆ ವಿವರಿಸುತ್ತಾ ಹೋದರು. 'ಆಕೆ ಪಾರ್ಟಿಯಲ್ಲಿ ಉಟ್ಟ ಬಿಳಿ ಸ್ಟ್ರ್ಯಾಪ್ ಲೆಸ್ಸ್ ಗೌನಿನಲ್ಲೇ ಇದ್ದಳು. ಮುಳುಗಿದ ಎಲ್ಲಾ ಲಕ್ಷಣಗಳೂ ಶವದ ಮುಖದಲ್ಲೂ ಕಂಡವು. ಆದರೆ ಯಾಕೋ, ನನಗೆ ಆಕೆ ಸಹಜವಾಗಿ ಮುಳುಗಲಿಲ್ಲ ಎನಿಸಿತು. ಸ್ವಲ್ಪ ಕೊನೆ ನಿಮಿಷಗಳಲ್ಲಿ ಹೋರಾಟ ಮಾಡಿ ಹೊರಬರಲು ಶತ ಪ್ರಯತ್ನ ಮಾಡಿಯೂ ವಿಫಲಳಾಗಿದ್ದಾಳೆ ಅನ್ನುವಂತೆ ಈಜುಕೊಳದ ಹೊರಗೆಲ್ಲಾ ನೀರು ದೂರದವರೆಗೂ ಚೆಲ್ಲಾಡಿತ್ತು. ಬಹುಶಃ ನಮಗೆ ಕಾಣದ ಸ್ಥಳದಲ್ಲಿ ಮೂಕ ಪೆಟ್ಟಾಗಿರಬಹುದು. ನಿನ್ನೆ ರಾತ್ರಿ ಕತ್ತಲಲ್ಲಿ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸಲಿಲ್ಲ. ಹೇಗೂ ಅದು ಪೋಸ್ಟ್ ಮಾರ್ಟೆಮ್ ರಿಪೋರ್ಟ್‌ನಲ್ಲಿ ಬರತ್ತೆ' ಎಂದು ಅಭಿಪ್ರಾಯ ಪಟ್ಟರು ಖಾದರ್.

'ಹೆಣವನ್ನು ಗುರುತಿಸಿದ್ದು ಯಾರು ಇನ್ಸ್‌ಪೆಕ್ಟರ್?' ಎಂದ ಕೀರ್ತಿಮಾನ್ ಅವರನ್ನು ಗಮನಿಸುತ್ತಾ.

ಖಾದರ್ ಅಚ್ಚರಿಯಿಂದ ತಲೆಯೆತ್ತಿ ಹೇಳಿದರು 'ಯಾಕೆ, ಅವರ ಪತಿ ಶಶಿಧರ್ ಅಲ್ಲೆ ಇದ್ದರಲ್ಲಾ?.. ಅವರೇ ಅಳು ಅಳುತ್ತಾ ಗುರುತಿಸಿದರು. ಅವರು ಬಹಳ ಶಾಕ್ ಆಗಿದ್ದರು. ಅಲ್ಲದೆ ಎಲ್ಲರೂ ಅದುವರೆಗೂ ಆಕೆಯನ್ನು ಪಾರ್ಟಿಯಲ್ಲಿ ನೋಡಿದವರು, ಹಲವು ವರ್ಷಗಳಿಂದ ಅವಳ ಪರಿಚಯದವರು.. ಅನುಮಾನವೇ ಇರಲಿಲ್ಲ.'

'ಆಮೇಲೆ ಏನಾಯಿತು?'

'ನಾ ಕಂಡ ಹಾಗೆ ಎಲ್ಲರೂ ಸಿಕ್ಕಾಪಟ್ಟೆ ಕುಡಿದಿದ್ದರು, ರಾತ್ರಿ ಹನ್ನೆರಡೂವರೆ ಹೊತ್ತಿಗೆ ಎಲ್ಲಾ ಬಗೆಯ ವಿದೇಶಿ ಮದ್ಯದ ಹೊಳೆಯೇ ಹರಿದಿತ್ತು. ಜತೆಗೆ ಬಗೆ ಬಗೆಯ ವೆಜ್– ನಾನ್ ವೆಜ್ ಭಾರೀ ಭೋಜನ. ಶಶಿಧರ್ ಸಹಿತಾ ಹೆಚ್ಚು ಕುಡಿದು ತೂರಾಡುತ್ತಿದ್ದರು ಆ ಸಮಯಕ್ಕೆ.

'ಯಾವಾಗಲೂ ಅವಳಿಗೆ ಈ ಈಜುಕೊಳದ ಬಗ್ಗೆ ಬಹಳ ಆಸ್ಥೆ, ಅವಳ ಫೇವರಿಟ್ ಜಾಗ ಇದು ಮನೆಯಲ್ಲಿ.. ಕೊನೆಗೆ ಕುಡಿದಿರುವ ಸ್ಥಿತಿಯಲ್ಲಿ ಇಲ್ಲೇಕೆ ಒಬ್ಬಳೇ ಬಂದಳೋ ಗೊತ್ತಿಲ್ಲಾ!' ಎಂದು ಅತ್ತು ಗೋಳಾಡಿದರು ಶಶಿಧರ್' ಎಂದು ವಿವರಿಸಿದರು. ಆಗ ಪೋಲೀಸ್ ಪೇದೆಯೊಬ್ಬ ಬಂದು ಇಬ್ಬರಿಗೂ ಫ್ಲಾಸ್ಕಿನಿಂದ ಬಿಸಿ ಕಾಫಿ ಹುಯ್ದುಕೊಟ್ಟ.

'ಸ್ವಿಮಿಂಗ್ ಕಲಿತವರೆಗೂ ಹೆಂಡ ಕುಡಿದ ಸ್ಥಿತಿಯಲ್ಲಿ ಬಲವಂತವಾಗಿ ಮುಳುಗಿಸಿ ಹಿಡಿದು ಕೊಲ್ಲಬಹುದಲ್ಲವೆ, ಇನ್ಸ್‌ಪೆಕ್ಟರ್?' ಕೀರ್ತಿಮಾನ್ ಅರೆಕ್ಷಣ ಯೋಚಿಸಿ ಕೇಳಿದ, ಕಾಫಿ ಗುಟುಕರಿಸುತ್ತಾ.

ಖಾದರ್ ಒಪ್ಪಿದಂತೆ ತಲೆಯಾಡಿಸಿದರು. 'ಅದು ಇನ್ನು ಮುಂದೆ ಕೊಲೆ ಅನ್ನುವ ಅನುಮಾನ ಬಂದರೆ ಮಾತ್ರ ವಿಚಾರಿಸಬೇಕಾಗುತ್ತೆ...'

'ಏನೇ ಆಗಲಿ, ಮೊದಲ ಅನುಮಾನ ಯಾವಾಗಲೂ ಕೊಲೆಯಾದವಳ ಗಂಡನ ಮೇಲೇ ಬರುತ್ತೆ ಅಲ್ವೆ?' ಶಶಿಧರ್ ಸಾಮಾನ್ಯ ಪ್ರಶ್ನೆಯ ದನಿಯಲ್ಲಿ ಮುಂದುವರೆಸಿದ.

'ಹೌದು, ಯು ಆರ್ ರೈಟ್..ಅವರ ಮಧ್ಯೆ ಏನಾದರೂ ವಿರಸವಿದ್ದು ಆತನೇ ಹೆಂಡತಿಯನ್ನು ಕೊಂದಿರ ಬಹುದಾ ಅಂತಾ. ಆದರೆ ಈ ಕೇಸಿನಲ್ಲಿ ಶಶಿಧರನ ನೋಡಿ ಮೊದಲ ವಿಚಾರಣೆ ಮಾಡಿದ ಮೇಲೆ ನನಗೆ ಹಾಗನ್ನಿಸುತ್ತಿಲ್ಲಾ..' ಎಂದರು ಖಚಿತವಾದ ಸ್ವರದಲ್ಲಿ.

ಕೀರ್ತಿಮಾನ್ ಅದನ್ನು ಕೆದಕುವುದು ಬೇಡ ಎಂದು ಇನ್ನೊಂದು ದಾರಿಯನ್ನು ಹಿಡಿದ, 'ಆಕೆಯ ಅವಳಿ ತಂಗಿ ಕಂಚಿಯನ್ನು ಭೇಟಿ ಮಾಡಿದಿರಾ?. ಅವಳು ಏನಂತಾಳೆ?

ಖಾದರ್ ಜೋರಾಗಿ ಆಕಳಿಸಿದರು ನಿದ್ದೆಗೆಟ್ಟಿದ್ದರಿಂದ.

'ಹೂಂ ಕಣಯ್ಯ. ಇವತ್ತು ಬೆಳಗಿನ ಜಾವದವರೆಗೂ ನಾನು ಮನೆಯೇ ಸೇರಿಲ್ಲ. ಇದೇ ಆಗೋಯ್ತು. ಮತ್ತೆ ಎಂಟು ಗಂಟೆಗೇ ಎದ್ದು ಬಂದಿದ್ದೀನಿ. ಹಾ, ಏನಂದಿ? ಕಂಚನಾ? ಸ್ಟೇಜ್ ನೇಮ್ ಕಂಚಿ ಅಂತಾರೆ..ಒಳ್ಳೇ ಜೆರಾಕ್ಸ್ ಕಾಪಿ ಹೊಡೆದ ಹಾಗೆ ಹೋಲಿಕೆಯಿದೆ ಇಬ್ಬರಲ್ಲೂ. ಅವಳೂ ರಾತ್ರಿಯೆಲ್ಲಾ ಡ್ರಾಮಾ ಪ್ರಾಕ್ಟೀಸ್ ಅಂತಾ ಹೊರಗೋಗಿದ್ದವಳು, ಅದ್ಯಾವುದೋ ವಿಚಿತ್ರ ನಾಟಕದ ವೇಷ, ಮೇಕಪ್ಪಿನಲ್ಲಿ ಮನೆಗೆ ಬಂದಳು. ನಾವು ಅಲ್ಲೇ ಕಾಯುತ್ತಿದ್ದೆವು. ಎರಡು ಗಂಟೆ ರಾತ್ರಿಗೆ ಸುದ್ದಿ ಕೇಳಿ ಕಿರುಚಿ ಬಿಕ್ಕಿ ಬಿಕ್ಕಿ ಅತ್ತಳು. ಅವಳಿಗೇ ನಾವು ಗ್ಲುಕೋಸ್ ನೀರು ಕುಡಿಸಿ ಸಮಾಧಾನ ಮಾಡ್ಬೇಕಾಯ್ತು.

'ಬಂಗಾರದಂತಾ ಅಕ್ಕಾ, ಆ ಕೆಟ್ಟ 5 ಕೋಟಿ ರೂಪಾಯಿ ಪಾಲಿಸಿ ಯಾಕೋ ಅವಳ ಮರಣ ಶಾಸನವನ್ನೇ ಬರೆಯಿತು ಅಂತಾ ನಿಮ್ಮ ಇನ್ಸೂರೆನ್ಸ್ ಕಂಪನಿಗೆ ಚೆನ್ನಾಗಿ ಶಾಪ ಹಾಕಿದಳು' ಎಂದು ಇವನತ್ತ ಚೇಷ್ಟೆಯ ನೋಟ ಬೀರಿದರು ಖಾದರ್.

ಕೀರ್ತಿಮಾನ್ ಗಹಗಹಿಸಿ ನಕ್ಕ.'ಅದಕ್ಕಿಂತಾ ಹಿಡಿಶಾಪ ನಮ್ಮವರೇ ನಮ್ಮ ಕಂಪನಿಗೇ ಹಾಕುತ್ತಿದ್ದಾರೆ. ಆಕೆ ಹಾಗಂತಾ ಐದು ಕೋಟಿ ಹಣ ಕ್ಲೈಮ್ ಮಾಡುವುದೇನು ಬಿಟ್ಟು ಬಿಡುತ್ತಾಳೆಯೇ? ಅದು ಬಿಡಿ! ಅಲ್ಲದೇ ಅವಳಿಗೂ ಭಾವ ಶಶಿಧರ್‌ಗೂ ರಿಲೇಶನ್ಸ್ ಹೇಗೆ ಏನಾದರೂ ಗೊತ್ತಾಯಿತೆ?'

ಇದು ಉತ್ತರಿಸಲು ಮುಜುಗರದ ಪ್ರಶ್ನೆ ಎಂದೂ ಅವನಿಗೆ ಗೊತ್ತು. ಆದರೂ ತನಿಖೆಯೆಂದ ಮೇಲೆ ತಿಳಿಯಲೇ ಬೇಕು.

ಖಾದರ್ ಇದಕ್ಕೆ ಸಿಡಿಮಿಡಿಗೊಂಡರು 'ನಮಗೆ ಇದಕ್ಕೆ ಮುಂಚೆ ಅವರಿಬ್ಬರ ಸಂಬಂಧದ ಬಗ್ಗೆ ಹೇಗೆ ಗೊತ್ತಿರಲು ಸಾಧ್ಯ? ಇಬ್ಬರಿಗೂ ಶಾಕ್ ಮತ್ತು ತೀವ್ರ ದುಃಖ ಆಗಿದೆ ಅನ್ನುವುದು ಖಚಿತವಾಗಿದೆ. ಸದ್ಯಕ್ಕೆ ನಾವು ಅಷ್ಟೇ ಹೇಳಲು ಸಾಧ್ಯ..' ಎಂದರು ಮೊಟಕಾಗಿ.

ಕೀರ್ತಿಮಾನ್ ಇನ್ನು ಮಾತು ಮುಗಿಯಿತೆಂಬಂತೆ ಏಳಲು ಸಿದ್ಧನಾದ.

'ನೀವು ಶಶಿಧರ್ ಅವರನ್ನೂ ಭೇಟಿ ಮಾಡಿ ವಿಚಾರಿಸಿದ್ರಾ..?' ಎಂದ.

ಖಾದರ್ ಅಸಹನೆಯಿಂದ ತಲೆಯಾಡಿಸಿದರು, 'ಅರೆ, ವಿಚಾರಣೆ ಎಲ್ಲಾ ಮಾಡಲು ಸಮಯವೆಲ್ಲಿತ್ತು? ಹತ್ತು ನಿಮಿಷ ಆ ದುಃಖದಲ್ಲೇ ಮಾತಾಡಿದ್ದು ಉಂಟು. ಅವರಿಗೆ ತುಂಬಾ ಶಾಕ್ ಆಗಿದೆ. ತನ್ನ ಹೆಂಡತಿ ಜಾರಿ ಬಿದ್ದು ಸತ್ತಿದಾಳೆ ಅಂತಾರೆ. ಕೀರ್ತಿ, ನಿಮ್ಮ ಇನ್ಸೂರೆನ್ಸ್ ಕಂಪನಿ ಕೊಂಕು ಬುದ್ಧಿ ನಂಗೊತ್ತು, ಗಂಡ ಮತ್ತು ನಾದಿನಿ ಸೇರಿ ಏನಾದರೂ ತಂತ್ರ ಮಾಡಿ ಅಕ್ಕನನ್ನು ಮುಗಿಸಿರಬಹುದಾ ಅಂತಾ. ಇನ್ನೂ ಪೊಲೀಸ್ ಕೇಸ್ ಮುಗಿಯುವರೆಗೂ ನಿಮ್ಮ ಕಂಪನಿಯೇನೂ ಈಗ ಕ್ಲೈಮ್ ಬಂದರೂ ತಕ್ಷಣ ಸೆಟಲ್ ಮಾಡಲ್ಲವಲ್ಲಾ. ಆದರೆ ನೀನು ಆ ದಾರಿಯಲ್ಲಿ ತನಿಖೆ ಮಾಡಿದರೆ ಜಾರುತ್ತೀಯಾ ನೋಡು..' ಎಂದು ಎಚ್ಚರಿಸಿದರು ಅನುಭವಿ ಖಾದರ್.

'ಸದ್ಯ, ನಾನೂ ಜಾರಿ ಆ ಕೊಳದೊಳಗೆ ಮುಳುಗದಿದ್ದರೆ ಸಾಕು! ಸರಿ, ನನಗೆ ಶವ ನೋಡಲು ಅನುಮತಿ ಪತ್ರ ಎಲ್ಲಾ ಕೊಡಿ. ನಾನು ಮಾರ್ಚುಯರಿಗೆ ಹೋಗಬೇಕು...'ಎಂದು ಹೊರಟ ಕೀರ್ತಿಮಾನ್.

## ಶವದ ವಾಸನೆ

ಶವಾಗಾರದ ವಾತಾವರಣ ಕೀರ್ತಿಮಾನ್‌ಗೆ ಹೊಸದೇನಲ್ಲ, ಇದಕ್ಕೂ ಮುನ್ನ ಹಲವು ಬಾರಿ ಹೋಗಿದ್ದರೂ ಅಲ್ಲಿನ ಹೆಣಕ್ಕೆ ಬಳಸುವ ಕೆಮಿಕಲ್‌ಗಳ ವಾಸನೆ ಗಪ್ಪೆಂದು ಅವನ ಮೂಗಿಗೆ ಬಡಿಯಿತು. ಒಳಗೆ ತಲುಪಿದಾಗ ವೈದ್ಯರು ಆ ಶವವನ್ನು ಪರೀಕ್ಷೆಗೆ ಸಿದ್ಧಪಡಿಸುತ್ತಿದ್ದುದರಿಂದ ಅವಸರವಸರವಾಗಿ ಶವದ ಮುಖವನ್ನು ಹೊದಿಕೆ ಮರೆ ಮಾಡಿ ತೋರಿಸಿದರು. ಮುಳುಗಿ ಸತ್ತದರಿಂದ ವಿರೂಪವಾದ ಆ ಸುಂದರಿಯ ಮುಖ ಬೇರೆಯವರಿಗೆ ಶಾಕ್ ಕೊಡಬಹುದಿತ್ತು, ಆದರೆ ಕೀರ್ತಿಮಾನ್ ಅಷ್ಟು ಅಳ್ಳೆದೆಯವನಾಗಿರಲಿಲ್ಲ. ಆದರೂ ಆ ದುರವಸ್ಥೆ ಕಂಡು ಸ್ವಲ್ಪ ಸಂಕಟವಾಯಿತು. ಇದರ ರಿಪೋರ್ಟ್ ಯಾವಾಗ ಸಿಗಬಹುದು ಎಂದು ಕೇಳಿದ್ದಕ್ಕೂ ಸರ್ಕಾರಿ ವೈದ್ಯರು ಹಾರಿಕೆ ಉತ್ತರ ನೀಡಿದರು. ಅದರ ಕಾಪಿ ಕೊಡುವಿರಾ? ಎಂದರೆ ಶವಪರೀಕ್ಷೆಯ ವರದಿಯ ಕಾಪಿಯನ್ನು ನಂತರ ಪೋಲಿಸರಿಂದಲೇ ಪಡೆಯಬೇಕೆಂದೂ, ತಾವು ಅಂತಾ ಫೇವರ್ ಮಾಡುವುದಿಲ್ಲವೆಂದೂ ವೈದ್ಯರು ಒರಟಾಗಿ ಅವನನ್ನು ಅಲ್ಲಿಂದ ಸಾಗ ಹಾಕಿದರು. ಯಾರೇ ಬಂದರೂ ನಮ್ಮ ಸರ್ಕಾರಿ ಅಧಿಕಾರಿಗಳನ್ನು ಸೌಜನ್ಯದ ವರ್ತನೆಗೆ ಪಳಗಿಸಲಾಗದು ಎಂದೆನಿಸಿತು ಅವನಿಗೆ.

ಅಲ್ಲಿಂದ ಕಾರು ಹತ್ತಿ ಹೊರಡುವ ಮುನ್ನ ಕಚೇರಿಯ ಫೈಲಿನಲ್ಲಿದ್ದ ಕಂಚಿಯ ನಂಬರಿಗೆ ಒಮ್ಮೆ ಕರೆ ಮಾಡಿದ. ಅಕ್ಕನ ಸಾವು ಆದ ಮರುದಿನವಾದ್ದರಿಂದ ನಿರೀಕ್ಷಿಸಿದಂತೆಯೇ ಆಕೆಯ ಮೊಬೈಲ್ ಆಫ್ ಆಗಿತ್ತು..ಇನ್ನು ಆಕೆಯ ಏಜೆಂಟ್ ರಾಜೂಗೆ ಕಾಲ್ ಮಾಡಿದಾಗ ಅವನು ನಿದ್ದೆ ಬರದ ಆಯಾಸದ ದನಿಯಲ್ಲಿ ಆಕಳಿಸುತ್ತಾ ಯಾರು ಬೇಕಿತ್ತು? ಎಂದನು. ತಾನು ಇನ್ಸೂರೆನ್ಸ್ ಕಂಪನಿಯ ಪತ್ತೇದಾರ ಎಂದ ತಕ್ಷಣ ಆತನ ದನಿಯಲ್ಲಿ ತಕ್ಷಣವೇ ಉತ್ಸಾಹ, ಕಾಳಜಿ ಮೂಡಿದಂತಾಗಿ, 'ಓಹ್, ಬನ್ನಿ ಸಾರ್...ನಾನು ಸಿಗುತ್ತೇನೆ...ಕಂಚಿಯ ಫ್ಲಾಟಿನ ವೆರಾಂಡದಲ್ಲೇ ಕಾಯುತ್ತಾ ಕುಳಿತಿದ್ದೇನೆ... ಅವಳಿಗೆ ಶಾಕ್ ಆಗಿದೆ ಅಂತಾ ವೈದ್ಯರು ಔಷಧಿ ಕೊಟ್ಟಿದ್ದರಿಂದ ರೆಸ್ಟ್‌ನಲ್ಲಿದ್ದಾಳೆ...ಪರವಾಗಿಲ್ಲ, ಎಬ್ಬಿಸಿ ಬಿಡ್ತೀನಿ ನೀವು ಬಂದರೆ...' ಎಂದು ಮತ್ತೆ ಮತ್ತೆ ಹೇಳಿದ. ಕೋಟ್ಯಂತರ ರೂಪಾಯಿಗಳ ಹಣದಾಸೆ ಅವನ ಸಹಕಾರವನ್ನು ಗೆದ್ದಿದೆ ಎಂದು ಸ್ಪಷ್ಟವಾಯಿತು. ತಾನೇನೂ ಅಲ್ಲಿಗೆ ಹೋದ ತಕ್ಷಣ ಐದು ಕೋಟಿ ರೂ ಚೆಕ್ ಕೊಡುವುದಿಲ್ಲ ಎಂದು ಹೇಳಿಬಿಟ್ಟಿದ್ದರೆ ಅವನ ವರ್ತನೆ ಹೇಗಾದಿತೆಂದು ನೆನೆಸಿಕೊಂಡು ತುಟಿಯಂಚಿನಲ್ಲಿ ವಂಗ್ಯ ನಗೆಯಾಡಿತು.

(ಸಶೇಷ)

**ತಿಮ್ಮಕ್ಕ**

ಭಕ್ತರಿಂದ ಪಡೀತಾನೆ
ಕೋಟಿ ಕೋಟಿ
ತಿರುಪತಿ ತಿಮ್ಮಪ್ಪ
ತಿಂಗಳಿಗೆ ಬರೀ
ಐನೂರು ರೂಪಾಯಿ ಪಿಂಚಣಿ
ಆಕೆ ಸಾಲು ಮರದ ತಿಮ್ಮಕ್ಕ!

★ ಕಾಸರಗೋಡು ಅಶೋಕ್ ಕುಮಾರ್

